ಒಂದಷ್ಟು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ ಎಂಬ ಬಗ್ಗೆ ಪ್ರಯತ್ನ ಮಾಡದೆಯೇ ಅದಕ್ಕೆ ಚಾರ್ಜ್ ಮಾಡುತ್ತೇವೆಂದರೆ ಅದು ಎಷ್ಟರಮಟ್ಟಿಗೆ ಧರ್ಮ? ಅದಕ್ಕೆ ತಾವು ಸ್ವಲ್ಪ ಗಮನ ಕೊಟ್ಟರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದು ಎಂದು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದೇನೆ. ಮತ್ತೆ ಬೇರೆ ಏನೂ ಇಲ್ಲ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಾದ ಮಾನ್ಯ ಅಶೋಕ್‌ರವರೇನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ನಾನೂ ಅವರ ಜೊತೆಯಲ್ಲಿ ಹೋಗಿದ್ದೆ, ಅದು ಸಸ್ಯ ನೆಡತಕ್ಕಂಥ ಒಂದು ಬೃಹತ್ ಕಾರ್ಯಕ್ರಮ, ಆದಿಚುಂಚನಗಿರಿ ಸ್ವಾಮಿಯವರು ಆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಅದಕ್ಕೆ ಆದಷ್ಟು ಸಸಿ ನೆಡತಕ್ಕ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಅವರು ಪ್ರಾರಂಭ ಮಾಡಿದ್ದಾರೆ. ನನಗೆ ಕೂಡ ಅವರು ಫೋನಿನ ಮೂಲಕ ಹೇಳಿದ್ದಾರೆ. ಇವತ್ತು ದುಡ್ಡು ಕೊಡತಕ್ಕದ್ದು ಇಲ್ಲ, ಅವರಿಗೆ ಉಚಿತವಾಗಿ ಸಸಿಗಳನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಆರ್. ಅಶೋಕ್ : ಧನ್ಯವಾದಗಳು, ಬಹಳ ಒಳ್ಳೆಯದಾಯಿತು.

(v) ನಿಯಮ 351ರ ಅಡಿಯಲ್ಲಿ ನೀಡಿರುವ ಸರ್ಕಾರದ ಉತ್ತರವು ಸಮಂಜಸವಲ್ಲ ಎಂಬುದರ ಬಗ್ಗೆ

† **ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್)** : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನೊಂದು ವಿಷಯವನ್ನು ಕೊಟ್ಟಿದ್ದೆ. ಅದರಲ್ಲಿ ಒಂದೇ ಕುಟುಂಬದ ನಾಲ್ಕು ಜನರನ್ನು encounter ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಪ್ರಕಾಶ್‌ರವರ ತಾವು ಉತ್ತರ ಕೊಡುವುದಾಗಿದ್ದರೆ you must listen a lot. ಏನೆಂದರೆ ಅವರು ಅಧಿಕಾರಿಗಳಿಂದ ಏನು ಪಡೆಯುತ್ತಾರೋ ಅದನ್ನು ಇಲ್ಲಿ ಓದಿಬಿಟ್ಟು ಮಾಹಿತಿ ಕೊಟ್ಟಿದ್ದೇನೆಂದು ಹೇಳಬಾರದು. ಒಂದೇ ಕುಟುಂಬದ ನಾಲ್ಕು ಜನರನ್ನು encounter ಮಾಡಿದ್ದಾರೆ, ಅದಕ್ಕೆ ಕಾರಣವೇನೆಂದರೆ, ನಾಲ್ಕು ಜನರೂ ಕೇಡಿಗಳು, ರೌಡಿಗಳು, ಸುಮ್ಮನೆ ಇರುವವರನ್ನು ಹೋಗಿ ಶೂಟ್ ಮಾಡಲು ಆಗುತ್ತದೆಯೇ? ಈ ರೀತಿ ಗಲಾಟೆ ಮಾಡಿದ್ದಾರೆ. ಕೊಲೆ ಮಾಡಿದ್ದಾರೆ ಹಾಗೆ ಮಾಡಿದ್ದರೆ ಹೀಗೆ ಮಾಡಿದ್ದಾರೆ public place ನಲ್ಲಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆ ಹೇಗಾಗುತ್ತದೆ? ಮಾನ್ಯ ರಾಜೇಂದ್ರನ್‌ರವರು ಶೂನ್ಯವೇಳೆ ಪಟ್ಟಿ 6 ರಲ್ಲಿ 351ರ ಅಡಿಯಲ್ಲಿ ನೀಡಿರುವ ಉತ್ತರವು ಸಮಂಜಸವಲ್ಲ ಎಂದು ಕೊಟ್ಟಿದ್ದಾರೆ. ಆದರೆ ಅವರು 9ನೆಯದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ನನಗೆ 9ನೆಯದ್ದರ ಪ್ರಸ್ತಾಪ ಎಂದರೆ ಅದರ ಫೈಲ್‌ನ್ನು ಇಟ್ಟುಕೊಂಡು ಕೂರುತ್ತೇವೆ, ಇಲ್ಲ 6ನೆಯದನ್ನು ಪ್ರಸ್ತಾಪ ಮಾಡುತ್ತೇವೆ

ಎಂದರೆ ಅದನ್ನು ತೆಗೆಯುತ್ತೇವೆ, ತಾವು ಎರಡೆರಡನ್ನು ಹೇಗೆ ಕೇಳುತ್ತೀರಿ? ನಿಯಮಾವಳಿಯ ಪ್ರಕಾರ ನೀವು ಬರೆದ ಉತ್ತರವನ್ನು ಕೊಡಬಾರದು ಎಂದು ಹೇಳುತ್ತೀರಿ, ಬರೆದ ಉತ್ತರವನ್ನೇ ಕೊಡಬೇಕು.

ಶ್ರೀ ಎಸ್. ರಾಜೇಂದ್ರನ್ : ನನಗೆ ಉತ್ತರ ಕೊಟ್ಟಿರುವುದೇನು, you have given the answer Anybody can read this, ನನಗೆ ಉತ್ತರವನ್ನು ಕೊಟ್ಟುಬಿಟ್ಟು ನಿಮ್ಮ ಕಡೆ ಯಾವುದನ್ನು ಕೊಟ್ಟಿದ್ದಾರೊ ನನಗೇನು ಗೊತ್ತಿದೆ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ, ನೀವು ಎರಡು ಬಾರಿ ನೋಟಿಸ್ ಕೊಟ್ಟಿದ್ದೀರಿ, ನಾವು ಶೂನ್ಯ ವೇಳೆಯನ್ನೆಲ್ಲಿ ರದ್ದು ಮಾಡಿದ್ದರಿಂದ ಅವಕಾಶ ಸಿಗದೇ ಇದ್ದದ್ದರಿಂದ ನಾವು ಒಂದು ಪಟ್ಟಿ ಮಾಡಿ ಒದಗಿಸಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಇವತ್ತು ಸುಮಾರು ಹೆಚ್ಚು ಕಮ್ಮಿ 31 ಶೂನ್ಯ ವೇಳೆ ಮತ್ತು ಇತ್ತೀಚೆಗೆ ಕಳುಹಿಸಿರುವ ಒಂದೆರಡು ಒಟ್ಟು 35 ಶೂನ್ಯವೇಳೆಯಾದರೆ ಅಧಿಕೃತ ಪಟ್ಟಿಯಲ್ಲಿರತಕ್ಕ ಕಾರ್ಯಕ್ರಮಗಳ ಗತಿಯೇನಾಗುತ್ತದೆ? ಅದರಲ್ಲಿ ಇಬ್ಬರು ಎರಡೆರಡು ಮೂರು ಮೂರು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ನಾನು ತಮ್ಮ ವಿವೇಚನೆಯನ್ನು ಪ್ರಶ್ನೆ ಮಾಡುತ್ತಿಲ್ಲ, ದಯವಿಟ್ಟು ಇದರಲ್ಲಿ ಒಂದು ನಿಯಂತ್ರಣಕ್ಕೆ ತರಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ನಾನೇನು 351 ರಲ್ಲಿ ಕೇಳಿದ್ದೆನೋ ಅದು unsatisfactory ಇದೆ ಆದ್ದರಿಂದ ನಾನು ಶೂನ್ಯವೇಳೆಯಲ್ಲಿ encounter ಬಗ್ಗೆ ಕೊಟ್ಟಿದ್ದೇನೆ. You have prepared the reply under 351 or zero hour ನಾಲ್ಕು encounter ನನ್ನ ಕ್ಷೇತ್ರದಲ್ಲಿ ಆಗಿದೆ. ಅದರ ಬಗ್ಗೆ ನೀವು ಪ್ರಿಪೇರ್ ಮಾಡಿಕೊಂಡಾದ ಮೇಲೆ ಬೇಕಾದರೆ ನಾನು ಮಾತನಾಡುತ್ತೇನೆ. because ನನಗೆ ಉತ್ತರ ಕೊಟ್ಟಿರುವುದು ಅದರ ಬಗ್ಗೆನೇ ನಾಲ್ಕು ಜನ, ಅವರೆಂದರೆ ಸಗಾಯಂ, ಸಂಗಂ, ಗೋಪಿ, ಜಯಕುಮಾರ್ ಎಂದು ಕೊಟ್ಟಿದ್ದಾರೆ. I am not against the government, but I am bringing this to the notice of the government ಏನೋ ಒಬ್ಬ ಪೋಲಿಸ್ ಅಧಿಕಾರಿ ಯಾರೊ ದಾರಿಯಲ್ಲಿ ಹೋಗುವ ರೀತಿ ಉತ್ತರವನ್ನು ಕೊಟ್ಟರೆ ಅದನ್ನೇ ಓದಿ ಕಾನೂನು ಪ್ರಕಾರ ಸರಿಯಾಗಿದೆಯೆಂದು ಹೇಳಬಾರದು, ಒಂದೇ ಕುಟುಂಬದ four members have been killed. ಏನು ಕಾರಣ? ಕೊಲೆ ಮಾಡಿದ್ದಾರಾ? ಅವರು ಮಾಡಿಲ್ಲ, ಮಹಾ ಉತ್ತಮನು, ಬುದ್ಧನ ರೀತಿ ಮಹಾತ್ಮನ ರೀತಿ ಅವನು ಎಂದು ನಾನು ಹೇಳುತ್ತಿಲ್ಲ. ನಾಲ್ಕು ಜನ ಕಳ್ಳರೇ ಆಗಿರಲಿ, ಏನು ಕಾರಣದಿಂದ ಅವರನ್ನು ಕೊಲೆ ಮಾಡಿದ್ದಾರೆಂದರೆ, ಅಲ್ಲಿ ಲೂಟಿ ಮಾಡುವುದು. Gold mud ಅದರಲ್ಲಿ ಈ ಕುಟುಂಬದವರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಅವರ ಷೇರನ್ನು ಕೊಟ್ಟಿಲ್ಲ ಎಂದು ಒಬ್ಬ ಡಿ.ವೈ.ಎಸ್.ಪಿ. ಪ್ಲಾನ್ ಮಾಡಿ they have killed. That is very important. ಅಂಥವರಿಗೆ ತಾವು ಏನು ಶಿಕ್ಷೆಯನ್ನು ಕೊಡಬೇಕೆಂದರೆ you have to conduct a proper enquiry on him, suspend him or dismiss him from the service. He is more worst than Sangram Singh, ರಾಜ್ಯದ ಇತಿಹಾಸದಲ್ಲಿ ಅವನು ಇರುತ್ತಾನೆ, ಅವರನ್ನು ತೆಗೆಯಲು ಸಾಧ್ಯವೇ ಇಲ್ಲ, ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದಂಥ ಗೂಡ್ಸೆ ಇತಿಹಾಸದಲ್ಲಿ

ಹೇಗೆ ಇದ್ದಾನೊ ಆ ರೀತಿ ಇರುತ್ತಾನೆ, ಅವನ ಹೆಸರನ್ನು ಹೇಳಿದ ತಕ್ಷಣ ಅಷ್ಟೊಂದು ನೋವಾಗಿಬಿಟ್ಟರೆ

ಶ್ರೀ ಎಂ.ಪಿ. ಪ್ರಕಾಶ್ : ನೋವಲ್ಲ, ನೀವು ಆ ರೀತಿ ಮಾತನಾಡಬಾರದು, ವಿನಾಕಾರಣ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗದಂಥವರ ಹೆಸರುಗಳನ್ನು ಹೇಳಬಾರದು, ಅದು ನಿಯಮ. ನಾವು ಅದರಿಂದ ನೋವನ್ನು ಅನುಭವಿಸುತ್ತೇವೆ ಎಂದಲ್ಲ.

1.00 ಪಿಎಂ

I am trying to guide you. If you feel hurt about it, I am sorry for it.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಸಂಗ್ರಾಂ ಸಿಂಗ್ ಬಗ್ಗೆ ಚರ್ಚೆ ಸಮಯದಲ್ಲಿ ಉದಾಹರಣೆಗೆ ಕೊಟ್ಟಿದ್ದೇನೆ.

SRI M.P. PRAKASH : ಸಂಗ್ರಾಂ ಸಿಂಗ್ ಅಂದರೆ. You are telling something against which he cannot defend it in this House. ಅದಕ್ಕೇನಾದರೂ ಇದ್ದರೆ ನೋಟಿಸ್ ಕೊಡಬೇಕಾಗುತ್ತದೆ. we have to conduct business according to rules and procedure. I am just trying to guide you.

SRI S. RAJENDRAN : You are Quite senior, well learned people. Giving an example, there is nothing wrong in it.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ನೀವು ಪ್ರಸ್ತಾಪ ಮಾಡುತ್ತಿದ್ದೀರಿ. ಅದರ ಬಗ್ಗೆ ನೋಟಿಸ್ ಕಳುಹಿಸಿದ್ದೀರಿ. ಅದನ್ನು ಪ್ರಸ್ತಾಪ ಮಾಡಿ, ಸರ್ಕಾರದವರು ಉತ್ತರ ಕೊಡುತ್ತಾರೆ. ಚರ್ಚೆಗೆ ಅವಕಾಶವಿಲ್ಲವೆಂದು ನಾನು ಪದೇ ಪದೇ ಹೇಳುತ್ತಿದ್ದರೂ ಸದಸ್ಯರು ಸಹಕರಿಸುತ್ತಿಲ್ಲ. ದಯವಿಟ್ಟು ಸಹಕರಿಸಿ.

SRI S. RAJENDRAN : I have not gone out of the way. I am giving an example to the respectable Minister. ಇಂತಹವರು ತಪ್ಪು ಮಾಡಿದಿನದ ಸಮಯ ಸಾಯಂಕಾಲ 4.30 ಗಂಟೆಗೆ ಮಾರ್ಕೆಟ್ ಪ್ಲೇಸ್‌ನಲ್ಲಿ ಎನ್‌ಕೌಂಟರ್ ಮಾಡಿದ್ದಾರೆಂದರೆ, ಎಷ್ಟು ಅನ್ಯಾಯವಾಗಿ ಆ ಕೆಲಸ ಮಾಡಿದ್ದಾರೆ, ಅಂತಹ ಸಬ್ ಇನ್‌ಸ್ಪೆಕ್ಟರ್‌ಗೆ ಇವರು ಸಸ್ಪೆಂಡ್ ಮಾಡಿ, ಎನ್ಕ್ವೈರಿ ಮಾಡಿ ಅವರನ್ನು ಟ್ರಾನ್ಸ್‌ಫರ್ ಮಾಡಿದರು. ಒಳ್ಳೆಯ ಕೆಲಸ ಮಾಡಿದವರಿಗೆ ಏಕೆ ಇಟ್ಟುಕೊಳ್ಳಬಾರದು? ಸರ್ಕಾರದವರನ್ನು ಕೇಳಿದರೆ ಏನು ಹೇಳುತ್ತಾರೆಂದರೆ, ನಾವು ರೌಡಿಗಳಿಗೆ ಕಡಿಮೆ ಮಾಡಿದ್ದೇವೆ. ರೌಡಿಗಳು ನಮ್ಮ ಊರಿನಲ್ಲಿ ಇಲ್ಲವೆಂದರೆ, do you mean to say that there are no rowdies in KGF? these famillies ಕಳ್ಳತನ ಮಾಡಿದ್ದಾರೆಂದು ಎನ್‌ಕೌಂಟರ್ ಮಾಡಿದ್ದೀರಾ? It is due to personal vengeance because he has not cooperated.ಅವನು ಯಾವುದು ಗೋಲ್ಡ್ ಮಡ್ ಕಳ್ಳತನ ಮಾಡುತ್ತಾನೆ, ಅದರಲ್ಲಿ ಇವರಿಗೆ ಶೇರ್ ಕೊಡಲಿಲ್ಲವೆನ್ನುವ ಒಂದೇ ಕಾರಣಕ್ಕಾಗಿ All the four members have been encountered. Apart from that .... ನನ್ನ ಊರಿನಲ್ಲಿ ಇನ್ನೂ ಸುಮಾರು ಮೂರು ಕೊಲೆಗಳಾಗಿವೆ. ಮೂರು ಮರ್ಡರ್ ಬಗ್ಗೆ ಯಾವುದನ್ನೂ ಇವರು ಕಂಡುಹಿಡಿದಿಲ್ಲ. But he has given concentration only for one family. ಕಾಮಸಂದ್ರದಲ್ಲಿ 10 ದಿವಸಗಳ ಹಿಂದೆ ಮರ್ಡರ್ ಆಗಿದೆ, they have not arrested anybody.

ಅಧ್ಯಕ್ಷರು : ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಸ್. ರಾಜೇಂದ್ರನ್ : ನಾನು ಎಷ್ಟು ಹೇಳಿದರೂ ಸಚಿವರಾದ ಶ್ರೀ ಪ್ರಕಾಶ್‌ರವರು ಉತ್ತರ ಕೊಟ್ಟ ಮೇಲೆ ನಾನು ಮಾತನಾಡುತ್ತೇನೆ. ಅದಕ್ಕಿಂತ ಮುಂಚೆ ಅವನು ಎಂತಹ ಕ್ಯಾರೆಕ್ಟರ್‌ನವನು, ಎಂದರೆ ಸನ್ಮಾನ್ಯ ಮುಖ್ಯ ಮಂತ್ರಿ ಅವರು ಅವನಿಗೆ ವರ್ಗಾವಣೆ ಮಾಡುವಂತೆ ಬರೆದಿದ್ದಾರೆ. More than a week is over. I am waiting. Such a man should not only be transferred but a proper enquiry should be conducted in the interest of the people. Justone week back a murder has taken place in Kamasandra. ಸತ್ತು ಹೋಗಿರುವವನು ಒಂದು ಸ್ಟೇಟ್ ಮೆಂಟ್ ಕೊಟ್ಟಿದ್ದಾನೆ. ಇಂತಹವನಿಂದ ನನಗೆ ಕೊಲೆಯಾಗಬಹುದು, ಇಂತಹವರಿಂದ ನನಗೆ ಅನ್ಯಾಯವಾಗಬಹುದು ಎಂದು ಹೇಳಿದ್ದಾನೆ. He has not taken any responsibility. That man died just 3-4 days back. ಅವನ ಹೆಂಡತಿ ಈಗ ಸಾಯುವ ಹಂತದಲ್ಲಿದ್ದಾಳೆ. Any movement she is about the die, but till now he has not arrested any body what a politic condition ಅವರ ಒಂದು ಪೋಟೋ ಹಾಕಿ, ಇಬ್ಬರು ಜನ ಸಹಿ ಹಾಕಿ ಇಂತಹ ಪೊಲೀಸ್ ಅಧಿಕಾರಿ ನಮ್ಮ ಊರಿನಲ್ಲಿರಬೇಕು, ಎಂದು ಹೇಳಿರುವಂಥದ್ದು ಸದನದಲ್ಲಿ ತೋರಿಸುವುದಕ್ಕೆ ನನಗೆ ನಾಚಿಕೆಯಾಗುತ್ತದೆ. Being a Police Officer why he should put up this? ಮುಖ್ಯ ಮಂತ್ರಿಯವರು ಅವನಿಗೆ ಟ್ರಾನ್ಸ್‌ಫರ್ ಮಾಡಿ ಎಂದು ಬರೆದ ತಕ್ಷಣ ಒಂದು ನೋಟಿಸ್ ಹಾಕಿದ್ದಾರೇ. ಇವರು ಬಹಳ ಒಳ್ಳೆಯವರು, ಇವರು ಇಲ್ಲಿಯೇ ಇರಬೇಕೆಂದು ಬರೆದಿದ್ದಾರೆ. what a plan he is doing.one answer you can say, suspend him, transfer him and terminate him. This is my demand. what all I know, as a legistator, I am bringing this to your notice with feelings from my heart. ಅಷ್ಟು ಅನ್ಯಾಯ ಮಾಡುತ್ತಿದ್ದಾನೆ, ಜನರಿಗೆ ತೊಂದರೆ ಕೊಡುತ್ತಿದ್ದಾನೆ, He himself he looking in my place, please see his old Records he is a bad character. Deputy superintendent of police in KGF. ಅವರು ಕೊಟ್ಟಿರುವ ಮಾಹಿತಿ ಸುಳ್ಳು. ಮಾನ್ಯ ಮುಖ್ಯ ಮಂತ್ರಿಯವರು....

ಶ್ರೀ ಎನ್ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಶ್ರೀಯುತ ರಾಜೇಂದ್ರನ್‌ನವರು ಪೋಲಿಸ್ ಇಲಾಖೆಯ ಇನ್‌ಸ್ಪೆಕ್ಟರ್ ಬಗ್ಗೆ ಬಹಳ ದೊಡ್ಡ ಆರೋಪ ಮಾಡಿದ್ದಾರೆ. ಅದೇನಿದೆ ಎಂದು ನಾನು ಡಿಜಿಯಿಂದ ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಅವನು ಅಷ್ಟು ಸರಿ ಇಲ್ಲವೆಂದರೆ ಅಲ್ಲಿಗೆ ಹಾಕುವುದಿಲ್ಲ. ನೀವು ಅದನ್ನು ನಮಗೆ ಬಿಟ್ಟು ಬಿಡಿರಿ. I will take action.

SRI S. RAJENDRAN : I am proud of my Chief Minister. Please take action accordingly,